ನಾನು ಮೂರು ಪ್ರದೇಶಗಳನ್ನು ದಾಟಿದ್ದೇನೆ. ಗಡಿಯಾರ ನೋಡಿದೆ; ನಾನು ನಡೆಯುತ್ತಾ ನಾಲ್ಕು ಗಂಟೆಯಾಗಿವೆ. ನಾಲ್ಕು ಗಂಟೆಗಳಲ್ಲಿ ಮೂರು ಪ್ರದೇಶಗಳು ಹಾಗೂ ಹದಿನಾರು ಕಿ.ಮೀ. ನಡೆದಿರುವುದು ಅಷ್ಟು ಕಳಪೆಯೇನಲ್ಲ. ನನಗೆ ಹಸಿವೆಯಾಗಿದೆ, ಆದರೆ ಬೆಲರೂಪ್‌ಗೆ ಹೋಗಿಯೇ ಊಟ ಮಾಡುತ್ತೇನೆ ಎಂದು ಮುಂದಕ್ಕೆ ಸಾಗಲಾರಂಭಿಸಿದೆ.

**ತಂದೆ-ತಾಯಿಯೊಂದಿಗೆ ಭೇಟಿ: ಒಂದು ಹೆಜ್ಜೆ ಮುಂದೆ**

ನಾನು ಮೊದಲ ಬಾರಿಗೆ ಡೆನ್ಮಾರ್ಕ್‌ಗೆ ಬಂದಿದ್ದೆ. ನಾನು ಇಡೀ ಯೂರೋಪ್ ಅಲೆದಾಡಿದ್ದೆ, ಆದರೆ ಏಕೋ ಏನೋ ಈ ಸ್ಕಾಂಡಿನೇವಿಯನ್ ದೇಶ ಕೈತಪ್ಪಿ ಹೋಗಿತ್ತು. ಹೀಗಾಗಿ ಮೊದಲ ಬಾರಿಗೆ ಈ ದೇಶಕ್ಕೆ ಬಂದಿದ್ದೆ. ನೀನಾಳನ್ನು ಭೇಟಿಯಾಗುವುದು, ಅವಳೊಂದಿಗೆ ಸ್ವಲ್ಪ ಸಮಯವನ್ನು ಕಳೆಯುವುದು, ಅವಳ ವ್ಯಕ್ತಿತ್ವವನ್ನು ಅರಿತುಕೊಳ್ಳುವುದು ಹಾಗೂ ಅವಳ ಮನಸ್ಸನ್ನು ತಡಕಾಡುವುದು ನನ್ನ ಮುಖ್ಯ ಉದ್ದೇಶವಾಗಿತ್ತು.

ನಾನು ಕಾಸ್ಟ್ರುಪ್ ಏರ್‌ಪೋರ್ಟ್‌ನಿಂದ ಹೊರಬಂದಾಗ ಅವಳು ಅತಿಥಿಗಳ ಗ್ಯಾಲರಿಯಲ್ಲಿ ನನ್ನ ಸ್ವಾಗತಕ್ಕಾಗಿ ನಿಂತಿದ್ದಳು. ಅವಳು ಕೈಯಲ್ಲಿ ಒಂದು ಕೆಂಪು ಗುಲಾಬಿ ಹೂವನ್ನು ಹಿಡಿದಿದ್ದಳು. ಅವಳು ತನ್ನ ಕಪ್ಪು ಜಡೆಯನ್ನು ಬಿಗಿಯಾಗಿ ಕಟ್ಟಿದ್ದಳು; ಇದರಿಂದಾಗಿ ಅವಳ ಮುಖ ಮತ್ತಷ್ಟು ವಿಶಿಷ್ಟವಾಗಿ ಕಾಣ ಬರುತ್ತಿತ್ತು. ನೀಲಿ ಸ್ಕರ್ಟ್ ಮತ್ತು ಮಿನುಗುವ ಜಾಕೇಟಿನಲ್ಲಿ ನೀನಾ ಆಕರ್ಷಕವಾಗಿ ಕಾಣುತ್ತಿದ್ದಳು. ನಾನು ಮುಗುಳ್ನಗುತ್ತಾ ಅವಳೆಡೆಗೆ ಮುಂದುವರೆದು ಹೋದೆ.

'ವೆಲ್‌ಕಂ ಟು ಕೋಪನ್‌ಹೇಗನ್!' ಅವಳು ಗುಲಾಬಿ ಹೂವನ್ನು ನನ್ನೆಡಗೆ ಚಾಚುತ್ತಾ ಹೇಳಿದಳು.

'ಥ್ಯಾಂಕ್ಸ್!' ಎಂದು ಅವಳ ಗಲ್ಲಗಳನ್ನು ಚುಂಬಿಸಿದೆ.

'ಸೋ?' ಎಂದಳು.

'ಸೋ?' ನಾನು ಪುನರುಚ್ಚರಿಸಿದೆ, 'ನಾನು ಕೋಪನಹೇಗನ್‌ಗೆ ಬಂದಿದ್ದೇನೆ...'

'ನಾನದನ್ನು ನೋಡ್ತಿದ್ದೇನೆ... ಸ್ಕಾಟಿಶ್ ಜಂಟಲಮನ್!' ಅವಳು ಮುಗುಳ್ನಕ್ಕಳು. ನಾನು ಅವಳನ್ನು ಆಪಾದಮಸ್ತಕ ಗಮನಿಸಿದೆ. ಅವಳ ದೀರ್ಘ ಚಂಚಲ ಕಣ್ಣುಗಳಲ್ಲಿ ನನ್ನ ಕಣ್ಣುಗಳು ಬೆರೆತವು. ಆ ಕಣ್ಣುಗಳ ಸೌಂದರ್ಯ ನನ್ನನ್ನು ಬಹುವಾಗಿ ಆಕರ್ಷಿಸುತ್ತಿತ್ತು.

ನಾವಿಬ್ಬರು ಪರಸ್ಪರ ಕೈ ಕೈ ಹಿಡಿದುಕೊಂಡು ಕಾರ್ ಪಾರ್ಕಿಂಗ್ ಜಾಗಕ್ಕೆ ಹೋದೆವು. ತಣ್ಣನೆಯ ಗಾಳಿ ಬೀಸುತ್ತಿತ್ತು. ಅವಳು ಕಾರಿನ ಎಂಜಿನ್ ಸ್ಟಾರ್ಟ್ ಮಾಡಿದಳು, ನಾನು ಅವಳ ಪಕ್ಕದಲ್ಲಿ ಕೂತೆ. ಏರ್‌ಪೋರ್ಟಿನಿಂದ ಮೂರು ಕಿ.ಮೀ. ದೂರದಲ್ಲಿದ್ದ ಆಮಾ ಎಂಬ ಉಪನಗರದಲ್ಲಿ ಅವಳ ಮನೆಯಿತ್ತು. ನಾವು ಹಸುರು ಮತ್ತು ಹೂಗಳಿಂದ ಅಲಂಕೃತವಾದ ಉದ್ಯಾನವನ್ನು ದಾಟಿ ಮುಖ್ಯ ದ್ವಾರದೊಳಗೆ ಪ್ರವೇಶಿಸಿದೆವು. ನಂತರ ರತ್ನಗಂಬಳಿಯನ್ನು ಹಾಸಿದ್ದ ಹಾಲ್‌ನಲ್ಲಿ ನಮ್ಮ ಜಾಕೆಟ್, ಮಫ್ಲರ್‌ಗಳನ್ನು ಕಳಚಿ ನಮ್ಮನ್ನು ನಾವು ಹಗುರಗೊಳಿಸಿಕೊಂಡೆವು. ಮನೆಯ ವಿನ್ಯಾಸ ತುಂಬಾ ಸುಂದರವಾಗಿತ್ತು.

ಪ್ರವೇಶದ ಹಾಲ್‌ನ ತುದಿಯಲ್ಲಿ ಒಂದು ವಿಶಾಲ ಆಯತಾಕಾರದ ಲಿವಿಂಗ್ ರೂಮ್ ಇತ್ತು; ಅಲ್ಲಿಗೆ ಎದುರಿಗಿದ್ದ ನಾಲ್ಕು ಮೆಟ್ಟಿಲುಗಳಲ್ಲಿ ಇಳಿದು ಹೋಗಬೇಕಿತ್ತು. ನಾವು ಮೆಟ್ಟಿಲುಗಳಲ್ಲಿ ಇಳಿದು ವರಾಂಡದ ಕೆಳಭಾಗಕ್ಕೆ ಹೋದೆವು. ಗಾಜಿನ ಕಿಟಕಿಗಳಿಂದಾವರಿಸಿದ ಈ ಪಾರದರ್ಶಕ ಗ್ಲಾಸ್ ಹೌಸ್ ಕ್ಲಾಸಿಕ್ ಆಗಿತ್ತು. ಕಿಟಕಿಗಳಿಂದ ಗುಲಾಬಿ ಪೊದೆಗಳು ಮತ್ತು ಸೇಬಿನ ಮರಗಳು ಕಾಣಬರುತ್ತಿದ್ದವು.

'ಲವ್ಲಿ ಹೋಮ್' ನಾನು ಪ್ರಶಂಸೆಯನ್ನು ವ್ಯಕ್ತಪಡಿಸಿದೆ.

ಅವಳ ಇಬ್ಬರು ಹೆಣ್ಣುಮಕ್ಕಳು ಮನೆಯಲ್ಲಿದ್ದರು, ಇಬ್ಬರೂ ನನ್ನನ್ನು ಪ್ರೀತಿಯಿಂದ ಸ್ವಾಗತಿಸಿದರು. ನಾನು ತಕ್ಷಣ ನನ್ನ ಬ್ಯಾಗಿನಿಂದ ಸ್ಕಾಟಿಶ್ ಚಾಕೊಲೇಟ್ ಮತ್ತು ಬಿಸ್ಕತ್ ಪ್ಯಾಕೆಟುಗಳನ್ನು ಹೊರತೆಗೆದು ಅವರಿಗೆ ಕೊಟ್ಟೆ. ಓರ್ವ ಕಾಯಂ ಕೆಲಸದ ಹೆಂಗಸು ಸಹ ಮನೆಯಲ್ಲಿದ್ದಳು. ಅವಳು ನನ್ನ ಕೈ ಕುಲುಕಿದಳು. ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಆಯಾಳನ್ನು ಸದಾ ಮನೆಯಲ್ಲಿಟ್ಟುಕೊಳ್ಳುತ್ತೇನೆ, ಸಾಮಾನ್ಯವಾಗಿ ನಾನು ಆಫೀಸ್ ಕೆಲಸದ ನಿಮಿತ್ತ ನಗರದಿಂದ ಹೊರಗೆ ಹೋಗಬೇಕಾಗುತ್ತದೆ ಎಂದು ನೀನಾ ನನಗೆ ಹೇಳಿದ್ದಳು.

ಸಂಜೆಯಾಗಿತ್ತು. ನೀನಾ ನನಗೆ ಜೂಸ್ ಮತ್ತು ಡ್ರೈಫ್ರೂಟ್ಸ್‌ಗಳನ್ನು ಕೊಟ್ಟು ಅಡುಗೆ ಸಿದ್ಧತೆಯಲ್ಲಿ ತೊಡಗಿದಳು. ಅವಳಿಗೆ ಅವಳ ಆಯಾ ಸಹಾಯ ಮಾಡುತ್ತಿದ್ದಳು. ನಾನು ವರಾಂಡದಲ್ಲಿ ಕೂತು ಅವಳ ಪುತ್ರಿಯರೊಂದಿಗೆ ಮಾತಿಗಿಳಿದೆ. ಸ್ವಲ್ಪ ಹೊತ್ತಿನ ನಂತರ ನೀನಾ ಡ್ರಾಯಿಂಗ್ ರೂಮಿಗೆ ಬಂದು ನಮ್ಮನ್ನು ಡಿನ್ನರ್‌ಗೆ ಆಹ್ವಾನಿಸಿದಳು. ನಾವು ಡಿನ್ನರ್ ಟೇಬಲ್ ಬಳಿ ಬಂದು ಕೂತೆವು. ಟೇಬಲ್ ಮೇಲೆ ಫ್ರೆಂಚ್ ಬ್ರೆಡ್, ಪಚಡಿ, ಚಿಕನ್, ರೈಸ್, ಪಿಕಲ್, ಕೆನೆ ಮೊಸರು ಮತ್ತು ಕ್ರೀಮ್‌ನೊಂದಿಗೆ ಸೇಬು ಕೇಕ್‌ಗಳನ್ನಿಡಲಾಗಿತ್ತು. ಸೇಬು ನಮ್ಮ ತೋಟದ್ದು ಎಂದು ನೀನಾ ಹೇಳಿದಳು.

ನೀನಾ ಅಚ್ಚುಕಟ್ಟಾಗಿ ಮತ್ತು ವಿಶಿಷ್ಟ ಕ್ರಾಕರಿಯಲ್ಲಿ ಊಟವನ್ನು ಬಡಿಸಿದ್ದಳು; ಇದನ್ನು ನೋಡಿ ನಾನು ಪ್ರಭಾವಿತನಾದೆ. ನೀನಾ ಶಿಷ್ಟ ಮಹಿಳೆಯಾಗಿದ್ದಳು. ಅವಳ ಮನೆಯ ಪ್ರತಿಯೊಂದು ವಸ್ತುಗಳು ಸಹ ಉನ್ನತ ಮಟ್ಟದ್ದಾಗಿದ್ದವು. ಅವಳ ಆಯಾ ಸಹ ಟಿಪ್ ಟಾಪ್ ಆಗಿದ್ದಳು. ಊಟವಾದ ನಂತರ ಕರೀನಾ ಮತ್ತು ಜೊಹಾನಾ ಮೇಲಂತಸ್ತಿನಲ್ಲಿದ್ದ ತಮ್ಮ ರೂಮಿಗೆ ಹೋದರು. ಆಯಾ ಬೇಸ್‌ಮೆಂಟಿನಲ್ಲಿದ್ದ ತನ್ನ ಕೊಠಡಿಗೆ ಹೋದಳು. ನಾನು ಮತ್ತು ನೀನಾ ಲಿವಿಂಗ್ ರೂಮಿನಲ್ಲಿ ಕೂತು ಅನೇಕ ವಿಷಯಗಳ ಬಗ್ಗೆ ಮಾತನಾಡಿದೆವು. ನಂತರ ಅವಳೇ ನನ್ನ ಕೈಯನ್ನು ಹಿಡಿದು ತನ್ನ ಬೆಡ್‌ರೂಮಿಗೆ ನನ್ನನ್ನು ಕರೆದೊಯ್ದಳು. ನಾವು ಬಟ್ಟೆಗಳನ್ನು ಬದಲಿಸಿ ರಗ್ಗಿನೊಳಗೆ ನುಸುಳಿದೆವು.

ನೀನಾಳೊಂದಿಗೆ ಅವಳ ಮನೆಯಲ್ಲಿ ಕಳೆದ ಆ ಸಂಜೆ ತುಂಬಾ ಸುಂದರವಾಗಿತ್ತು. ನಾನು ಇಂದಿಗೂ ಆ ಕ್ಷಣಗಳನ್ನು ನೆನೆದು ಸಂತಸಗೊಳ್ಳುತ್ತೇನೆ. ಆದರೆ ಆ ಕ್ಷಣದಿಂದ ನಾವು ಅವಿಭಾಜ್ಯ ಅಂಗವಾದೆವು ಎಂದು ಹೇಳುವುದು ಒಂದು ಸವೆದ ರೋಮಾಂಚನಕಾರಿ ಮಾತಾಗುತ್ತದೆ. ನಾವು ಪರಸ್ಪರರಿಗಾಗಿ ಬದುಕಲು ಮತ್ತು ಜೀವಕೊಡಲು ಪಣತೊಟ್ಟೆವು. ಆದರೆ ವಾಸ್ತವಿಕತೆ ಎಂದರೆ, ನನ್ನ ಜೀವನದಲ್ಲಿ ನೀನಾಳ ಆಗಮನ ಅನೇಕ ಸಂದೇಹ, ಅನುಮಾನ, ಪ್ರಶ್ನೆಗಳು ಮತ್ತು ಚಿಂತೆಗಳನ್ನು ಹುಟ್ಟಿಸಿತ್ತು. ಅವಳು ವಾಸ್ತವವಾಗಿ ನನ್ನ ಬಗ್ಗೆ ಸೀರಿಯಸ್ ಆಗಿರುವಳೋ ಇಲ್ಲವೋ, ಈ ಹಿಂದೆ ಕೆಲವು ಮಹಿಳೆಯರೊಂದಿಗೆ ನನ್ನ ಸಮಯವನ್ನು ಹಾಳು ಮಾಡಿಕೊಂಡಂತೆ ಈಗ ನಾನು ಇವಳೊಂದಿಗೆ ನನ್ನ ಸಮಯವನ್ನು ಹಾಳು ಮಾಡಿಕೊಳ್ಳುತ್ತಿಲ್ಲ ತಾನೇ ಎಂಬುದನ್ನು ತಿಳಿಯಲು ಬಯಸುತ್ತಿದ್ದೆ. ಈ ಹಿಂದೆ ನಾನು ಮಹಿಳೆಯರೊಂದಿಗೆ ತುಂಬಾ ಭರವಸೆ ಮತ್ತು ಆಸೆಯನ್ನಿಟ್ಟುಕೊಂಡು ಪ್ರೀತಿಯ ಜಗತ್ತಿಗೆ ಹೆಜ್ಜೆಗಳನ್ನಿಡುತ್ತಿದ್ದೆ, ಆದರೆ ಅವರು ಹಿಂದಕ್ಕೆ ಸರಿಯುತ್ತಿದ್ದರು.

ನಾನು ಅಲ್ಪಕಾಲದ, ಶಾಶ್ವತವಲ್ಲದ ಸಂಬಂಧಗಳಿಂದ ತೀವ್ರವಾಗಿ ಬೇಸರಗೊಂಡಿದ್ದೆ. ಹೀಗೆ ಒಂದಾಗುವುದು, ಬೇರೆಯಾಗುವುದು ತುಂಬಾ ಕಷ್ಟವನ್ನು ಕೊಡುತ್ತದೆ. ನಮಗೆ ನಮ್ಮ ಜೀವಮಾನವಿಡೀ ಸಹ ಪ್ರಯಾಣಿಕರೊಬ್ಬರು ಬೇಕು. ನಾನು ಓರ್ವ ಉತ್ತಮ ಗುಣವುಳ್ಳ ಹೆಣ್ಣಿಗಾಗಿ ಹುಡುಕುತ್ತಾ ನನ್ನ ವಯಸ್ಕ ಮತ್ತು ವೃದ್ಧಾಪ್ಯದ ನಡುವಿನ ಅವಧಿ, ಅಂದರೆ ನಡುವಯಸ್ಸನ್ನು ತಲುಪಿದ್ದೆ. ಮನುಷ್ಯ ವೃದ್ಧನಾಗುತ್ತಿರುವಾಗ ಸಂಬಂಧದ ಬಗ್ಗೆ ಬದ್ಧತೆಯಿಲ್ಲದ ಹೆಣ್ಣಿನೊಂದಿಗೆ ಸಮಯವನ್ನು ಕಳೆಯಲು ಬಯಸುವುದಿಲ್ಲ.

ಮರುದಿನ ನಾನು ಮತ್ತು ನೀನಾ ದಿನವಿಡೀ ಕೋಪನ್‌ಹೇಗನ್‌ನಲ್ಲಿ ಸುತ್ತಾಡಿದೆವು. ಸಂಜೆ ಅವಳು ತನ್ನ ತಂದೆ–ತಾಯಿಯೊಂದಿಗೆ ನನ್ನನ್ನು ಭೇಟಿ ಮಾಡಿಸಲು ಕರೆದೊಯ್ದಳು. ನೀನಾ ಕಾರು ಚಾಲನೆ ಮಾಡುತ್ತಾ ನಗರದ ಪ್ರಮುಖ ಮಾರ್ಗಗಳು ಮತ್ತು ಕಟ್ಟಡಗಳ ಬಗ್ಗೆ ಮಾಹಿತಿ ಕೊಡುತ್ತಿದ್ದಳು. ಇಲ್ಲಿ ಅವಳು ನನಗೆ ಗೈಡ್ ಆಗಿದ್ದಳು. ನಾನು ಅವಳ ಪಕ್ಕದಲ್ಲಿ ನೆಮ್ಮದಿಯಿಂದ ಕೂತು ಎದುರಿನಿಂದ ಹಾದು ಹೋಗುತ್ತಿದ್ದ ದೃಶ್ಯಗಳನ್ನು ನೋಡುತ್ತಿದ್ದೆ. ಅದರೊಂದಿಗೆ ನೀನಾ ನನ್ನನ್ನು ತನ್ನ ತಂದೆ–ತಾಯಿಯರನ್ನು ಭೇಟಿ ಮಾಡಿಸಲು ಕರೆದೊಯ್ಯುತ್ತಿದ್ದಾಳೆ ಅಂದರೆ ಅವಳು ನನ್ನ ಬಗ್ಗೆ ಸೀರಿಯಸ್ ಆಗಿದ್ದಾಳೆಂದು ಯೋಚಿಸುತ್ತಿದ್ದೆ. ನಾನಿನ್ನೂ ಅವಳ ಮನಸ್ಸನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ ಆಗಿರಲಿಲ್ಲ. ವಾಸ್ತವವಾಗಿ ಅವಳು ನನ್ನ ಜೀವನ ಸಂಗಾತಿಯಾಗಲು ಬಯಸುತ್ತಿದ್ದಾಳೋ ಅಥವಾ ಇದುವರೆಗೆ ನನಗೆ ಸಿಕ್ಕ ಮಹಿಳೆಯರಂತೆ ಕೆಲವು ದಿನ ನನ್ನ ಜೀವನದಲ್ಲಿ ಬಂದು ಮತ್ತೆ ದೂರಕ್ಕೆ ಸರಿಯುತ್ತಾಳೋ!